**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**

**ಪೀಠಾಸೀನ ಕೊಳ್ಳೇಗಾಲ**

**ಎಸ್.ಸಿ. 5034/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಮಂಜುನಾಥ ಪ್ರಸಾದ್ | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ತಂದೆ ಹೆಸರು** | : | ಲೇಟ್ ಎಸ್. ಚಿಕ್ಕಯ್ಯ | 22.06.2026 |
| **ವಯಸ್ಸು** | : | 56 ವರ್ಷ | |
| **ವೃತ್ತಿ** | : | ಪಿ.ಎಸ್.ಐ, ಹನೂರು ಪೊ.ಠಾಣೆ | **ಪ್ರಾ.ಸಾಃ** 20 |
| **ವಾಸ ಸ್ಥಳ** | : | ರಾಮಾಪುರ | **ಚಾ.ಸಾಃ** 36 |

ಆರೋಪಿಯನ್ನು ವಿ.ಸಿ.ಯ ಮೂಲಕ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿತ್ತು, ಅವರಿಗೆ ಧ್ವನಿ ಕೇಳಿಸಲಾಗುತ್ತಿದೆಯಾ ಎಂದು ಪರಿಶೀಲಿಸಿದ ನಂತರ ಅವರ ಹಾಜರಾತಿಯಲ್ಲಿ ಸಾಕ್ಷಿಯ ವಿಚಾರಣೆಯನ್ನು ಮಾಡಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**ನಾನು ದಿಃ 01.08.2023 ರಿಂದ ದಿಃ 23.01.2026 ರವರೆಗೆ ಪಿ.ಎಸ್.ಐ ಆಗಿ ಹನೂರು ಪೊ.ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.**

ದಿಃ 21.05.2025 ರಂದು ನಾನು ಚಾ.ನಗರದ ಜಿಲ್ಲಾ ಪೋಲಿಸ್ ಕಚೇರಿಯ ಸಭೆಯಲ್ಲಿ ಹಾಜರಿದ್ದಾಗ ಬೆಳಗ್ಗೆ 10.30 ಗಂಟೆ ಸಮಯದಲ್ಲಿ ದೂರವಾಣಿ ಮೂಲಕ ಗುಳ್ಯದಬೈಲು ಗ್ರಾಮದಲ್ಲಿ ಮಹಾದೇವಿ ಎಂಬುವವರ ಕೊಲೆ ಆಗಿದೆ ಎಂದು ಮಾಹಿತಿ ಬಂದಿದ್ದು, ನಂತರ ನಾನು ಚಾಸಾ 37 ರವರಿಗೆ ಈ ಮಾಹಿತಿಯನ್ನು ತಿಳಿಸಿ ಅವರ ಸೂಚನೆಯಂತೆ ಗುಳ್ಯದಬೈಲು ಗ್ರಾಮಕ್ಕೆ ಮದ್ಯಾಹ್ನ 1.00 ಗಂಟೆಗೆ ಬೇಟಿ ನೀಡಿರುತ್ತೇನೆ. ಸದರಿ ಸ್ಥಳದಲ್ಲಿ ಚಾಸಾ 1 ರವರ ನೀಡಿದ

ದೂರನ್ನು ಸ್ವೀಕರಿಸಿ ಪ್ರಕರಣವನ್ನು ದಾಖಲಿಸಲು ಚಾಸಾ 26 ರವರ ಮೂಲಕ ಸದರಿ ದೂರನ್ನು ಠಾಣೆಗೆ ಕಳುಹಿಸಿರುತ್ತೇನೆ. ಪಿರ್ಯಾದಿಯನ್ನು ನಿಪಿ 1 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 1(ಸಿ) ಎಂದು ಗುರುತಿಸಲಾಯಿತು. ನಿಪಿ 1 ಅನ್ನು ಚಾಸಾ 6 ರವರು ಬರೆದಿರುತ್ತಾರೆ. ಸ್ಥಳಕ್ಕೆ ಸೋಕೋ ಸಿಬ್ಬಂದಿಯವರನ್ನು ಬರಮಾಡಿಕೊಂಡಿರುತ್ತೇನೆ. ಸೋಕೋ ಸಿಬ್ಬಂದಿಯವರು ಸ್ಥಳವನ್ನು ಪರಿಶೀಲನೆ ಮಾಡಿರುತ್ತಾರೆ. ನಂತರ ನಾನು ಚಾಸಾ 13 ರಿಂದ 15 ರವರ ಸಮಕ್ಷಮ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಮಾಡಿರುತ್ತೇನೆ. ಪಂಚನಾಮೆಯನ್ನು ಮದ್ಯಾಹ್ನ 2.15 ರಿಂದ 3.15 ರವರೆಗೆ ಜರುಗಿಸಿರುತ್ತೇನೆ. ಪಂಚನಾಮೆಯನ್ನು ನಿಪಿ 2 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 2(ಡಿ) ಎಂದು ಗುರುತಿಸಲಾಯಿತು. ಪಂಚನಾಮೆಯ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆದಿರುತ್ತೇನೆ. ಭಾವಚಿತ್ರಗಳನ್ನು ನಿಪಿ 3 ರಿಂದ 8 ಎಂದು ಗುರುತಿಸಲಾಯಿತು. ಕೃತ್ಯ ನಡೆದ ಸ್ಥಳದಿಂದ ಸೋಕೋ ಸಿಬ್ಬಂದಿಯವರು ರಕ್ತದ ಕಲೆಗಳನ್ನು ಸಂಗ್ರಹಿಸಿದರು. ನಾನು ಸ್ಥಳಕ್ಕೆ ಹೋದಾಗ ಮೃತಳ ಶವ ಮನೆಯ ಒಳಗೆ ಇತ್ತು. ಸೊಕೋ ಅಧಿಕಾರಿಗಳು ಶವ ಬಿದ್ದಿದ್ದ ಶವದ ನೆಲದ ಮೇಲಿನ ರಕ್ತವನ್ನು, ಗೋಡೆಯ ಮೇಲೆ ಅಂಟಿಕೊಂಡಿದ್ದ ರಕ್ತದ ಕಲೆಯನ್ನು, ರಕ್ತ ಇಲ್ಲದ ನೆಲದ ಸ್ವಲ್ಪ ಮಣ್ಣನ್ನು ಸಂಗ್ರಹಿಸಿರುತ್ತಾರೆ. ಮುದ್ದೆಮಾಲುಗಳನ್ನು ಮು.ಮಾ 4 ರಿಂದ 6 ಮತ್ತು 13 ಎಂದು ಈಗಾಗಲೇ ಗುರುತಿಸಲಾಗಿದೆ.

ಅದೇ ದಿನ ಮದ್ಯಾಹ್ನ 3.30 ರಿಂದ 5.30 ರವರೆಗೆ ಚಾಸಾ 13 ರಿಂದ 15 ರವರ ಸಮಕ್ಷಮ ಮೃತಳ ಶವಪಂಚನಾಮೆಯನ್ನು ಜರುಗಿಸಿರುತ್ತೇನೆ. ಶವ ಪಂಚನಾಮೆಯ ಸಮಯದಲ್ಲಿ ಮೃತಳ ಕತ್ತಿನ ಬಲಭಾಗದಲ್ಲಿ 3X4½ ಅಗಲ ಉದ್ದದ ಚಾಕುವಿನಿಂದ ಕುಯಿದ ಗಾಯ, ಗದ್ದದ ಮೇಲೆ 1 ಇಂಚು ಅಗಲ ಕಾಲು ಇಂಚು ಉದ್ದದ ಚಾಕುವಿನಿಂದ ಕುಯಿದ ಗಾಯ, ಎಡ ಮುಂಗೈ ಹತ್ತಿರ ಮುಂಭಾಗ 2X2 ವಿಸ್ತೀರ್ಣದ ಮತ್ತು ಸದರಿ ಸ್ಥಳದಲ್ಲಿ 2X1½ ಇಂಚು ವಿಸ್ತೀರ್ಣದ ಚಾಕುವಿನಿಂದ ಕುಯಿದ ಗಾಯಗಳು ಕಂಡು ಬಂದವು. ಶವ ಪಚನಾಮೆಯನ್ನು ನಿಪಿ 22 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 22(ಸಿ) ಎಂದು ಗುರುತಿಸಲಾಯಿತು. ಶವ ತನಿಖಾ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆಸಿರುತ್ತೇನೆ.

ಭಾವಚಿತ್ರಗಳನ್ನು ನಿಪಿ 3 ರಿಂದ 8 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಮೃತಳ ಮೈ ಮೇಲಿದ್ದ ಬಟ್ಟೆಗಳನ್ನು ಮತ್ತು ಒಡವೆಗಳನ್ನು ಗುರುತಿಸಿರುತ್ತಾರೆ. ಬಟ್ಟೆಗಳನ್ನು ಮು.ಮಾ 7 ರಿಂದ 10 ಎಂದು, ಒಡವೆಗಳನ್ನು ಮು.ಮಾ 10, 11 ಮತ್ತು 15 ಎಂದು ಈಗಾಗಲೇ ಗುರುತಿಸಲಾಗಿದೆ. ನಂತರ ಮೃತಳ ಶರೀರವನ್ನು ವೈದ್ಯಕೀಯ ಪರಿಕ್ಷೆಗೆಂದು ಚಾ.ನಗರ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಸ್ಥಳದಲ್ಲಿ ನಕಾಶೆಯನ್ನು ತಯಾರಿಸಿರುತ್ತೇನೆ. ನಕಾಶೆಯನ್ನು ನಿಪಿ 35 ಎಂದು, ಸಾಕ್ಷಿ ಸಹಿಯನ್ನು ನಿಪಿ 35(ಎ) ಎಂದು ಗುರುತಿಸಲಾಯಿತು. ಮಾದರಿ ಮಣ್ಣು ಇದ್ದ ಡಬ್ಬವನ್ನು ಮು.ಮಾ 16 ಎಂದು ಗುರುತಿಸಲಾಯಿತು. ಮುದ್ದೆಮಾಲುಗಳ ಸಂಬಂಧ ನ್ಯಾಯಾಲಯಕ್ಕೆ ಮಾಲುಪಟ್ಟಿಯನ್ನು ಸಲ್ಲಿಸಿರುತ್ತೇನೆ. ವೈದ್ಯರು ಮೃತಳಿಂದ ಸಂಗ್ರಹಿಸಿದ ವಸ್ತುಗಳನ್ನು ಚಾಸಾ 29 ರವರಿಂದ ಪಡೆದು ಆ ಸಂಬಂಧ ನ್ಯಾಯಾಲಯಕ್ಕೆ ಮಾಲುಪಟ್ಟಿಯನ್ನು ಸಲ್ಲಿಸಿರುತ್ತೇನೆ. ಮುಂದಿನ ತನಿಖೆಯನ್ನು ಚಾಸಾ 37 ರವರು ವಹಿಸಿಕೊಂಡಿರುತ್ತಾರೆ.

**<u>ಪಾಟೀ ಸವಾಲುಃ- ಶ್ರೀ ವಕೀಲರಿಂದ</u>**

ಕಾನೂನು ಸೇವಾ ಪ್ರಾಧಿಕಾರದಿಂದ ವಕೀಲರನ್ನು ನೇಮಿಸಲಾಗಿದ್ದು, ಈ ದಿನ ವಕೀಲರು ಗೈರು ಹಾಜರಿರುತ್ತಾರೆ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ